ಪ್ರಜಾವಾಣಿ

Thursday, February 4th, 2010

# ಜೈನ್ ವಿವಿ ನಾಟಕ ಸ್ಪರ್ಧೆ

ಜೈನ್ ಯುನಿವರ್ಸಿಟಿ ಮ್ಯಾನೇಜ್‌ಮೆಂಟ್ ಅಧ್ಯಯನ ಕೇಂದ್ರದ ಆಶ್ರಯದಲ್ಲಿ **ಗುರುವಾರದಿಂದ ಭಾನುವಾರದ** ವರೆಗೆ ರಾಷ್ಟ್ರಮಟ್ಟದ ಏಕಾಂಕ ನಾಟಕ ಸ್ಪರ್ಧೆ ನಡೆಯಲಿದೆ.

ಇದರಲ್ಲಿ ಬೆಂಗಳೂರು ಮಾತ್ರವಲ್ಲದೆ ಮುಂಬೈ, ಪುಣೆ, ದೆಹಲಿ ಮತ್ತು ಶಿವಮೊಗ್ಗದ 30ಕ್ಕೂ ಹೆಚ್ಚು ಕಾಲೇಜು ತಂಡಗಳು ಭಾಗವಹಿಸಲಿವೆ. ವಿದ್ಯಾರ್ಥಿಗಳಲ್ಲಿನ ಪ್ರತಿಭೆಗೆ ವೇದಿಕೆ ಕಲ್ಪಿಸುವುದು ಮತ್ತು ಅವರಲ್ಲಿ ಏಕತೆ, ಭಾರತೀಯತೆಯ ಭಾವನೆ ಮೂಡಿಸುವುದು ಸ್ಪರ್ಧೆಯ ಮುಖ್ಯ ಉದ್ದೇಶ.

ಸ್ಪರ್ಧೆ ಅವಧಿಯಲ್ಲಿ ನಿತ್ಯ ಸಂಜೆ 5 ಕ್ಕೆ ಹೆಸರಾಂತ ಹವ್ಯಾಸಿ, ವೃತ್ತಿ ತಂಡಗಳಿಂದ ನಾಟಕ ಪ್ರದರ್ಶನ, ಹಿರಿಯ ರಂಗಕರ್ಮಿಗಳಿಗೆ ಸನ್ಮಾನ ಆಯೋಜಿಸಲಾಗಿದೆ.

**ಗುರುವಾರ** 'ತಾಜ್‌ಮಹಲ್ ಕಾ ಟೆಂಡರ್' ಹಿಂದಿ ನಾಟಕ. **ಶುಕ್ರವಾರ** ಲಕ್ಷ್ಮೀ ಚಂದ್ರಶೇಖರ್ ಅಭಿನಯದ 'ಆಲ್ ಇಸ್ ವೆಲ್' ಇಂಗ್ಲಿಷ್ ನಾಟಕ.

ಸ್ಥಳ: ಜೆಎಸ್‌ಎಸ್ ಸಭಾಂಗಣ, 8ನೇ ಬ್ಲಾಕ್ ಜಯನಗರ. ಸ್ಪರ್ಧೆ ಬೆಳಿಗ್ಗೆ 9ಕ್ಕೆ ಆರಂಭ. ಮಾಹಿತಿ ಮತ್ತು ಪಾಸ್‌ಗಳಿಗಾಗಿ: 94495 25457/ 98864 03331.